
ಕೊಡಲು ಬಂದರೆ ಕುಳಿತ ಜಾಗದಿಂದ ಮೇಲೇಳದೆ, 'ಅಲ್ಲಿಟ್ಟು ಹೋಗಿ' ಎಂದು ಬಾಗಿಲ ಬಳಿಯ ಟೀಪಾಯ್ ತೋರಿಸೊ ತನ್ನ ಸ್ಥಾನದ ಮಹತ್ವವನ್ನು ತೋರಿಸ್ತಾಳೆ ಪಂಕಜ. ಇತ್ತೀಚೆಗೆ ಅವರ ಬಗ್ಗೆ ಮೊದಲಿದ್ದ ಯಾವ ಉತ್ಸಾಹವೂ ಉಳಿದಿರುವುದಿಲ್ಲ. ಕಿಟಕಿ ಕಡೆ ನೋಡುವುದನ್ನು ಕಡಿಮೆಮಾಡಿ ಫಿಸಿಕ್ಸ್‌ಅನ್ನು ತಲೆಗಿಳಿಸಿಕೊಳ್ಳಲು ಪಟ್ಟು ಹಿಡಿದಿರುತ್ತಾಳೆ. ಆಗಾಗ ಆ ಮೆಡಿಕಲ್ ಹುಡುಗ ಎಲ್ಲಿ? ಕಾಣಲೇ ಇಲ್ವೆ, ಎಂದೆನಿಸುವಾಗ ಪಂಕಜಳಿಗೆ ಎದುರು ಮನೆಯವರ ಮೇಲಿದ್ದ ಕುತೂಹಲ ಕಮರಿಹೋಗುತ್ತದೆ.

ಒಂದು ಸಂಜೆ ಮನೆ ಮಾಲೀಕ ಶರಭಣ್ಣ ಮನೆಗೆ ಬಂದಿರುವಾಗಲೇ ಮಧು ಬಂದು 'ಕೀ' ತೆಗೆದುಕೊಂಡು ಹೋಗುತ್ತಾನೆ. 'ಓಹೋ! ಎದುರು ಮನೆಯೋರು ನಿಮಗೆ 'ಕೀ' ಕೊಡ್ತಾರೋ. ಗಂಡ ಹೆಂಡ್ತಿರಿಬ್ಬರೂ ದುಡಿಯುವವರಾದರೆ ಇದೇ ಪಡಿಪಾಟ್ಲು ನೋಡಿ. ಒಬ್ಬರನ್ನು ಆಶ್ರಯಿಸದಿದ್ದರೆ ಆಗೋದೇ ಇಲ್ಲ' ಎಂದು ಗೇಲಿ ಮಾಡುತ್ತಾನೆ.

'ಅಲ್ಲಾ ಶರಭಣ್ಣೋರೇ, ಯಾರನ್ನಾದರೂ ನೆಂಟರನ್ನೋ, ಇಷ್ಟರನ್ನೋ ಬೇಕಾದವರನ್ನ ಇಟ್ಕೊಂಡರೆ ಇವರಿಗೂ ಅನುಕೂಲ. ಅವರಿಗೂ ಒಂದುಪಕಾರ' ಅನ್ನುತ್ತಾಳೆ ಅಮ್ಮ. 'ಏನು ದುಡಿದ್ರೇನು ಬಂತಮ್ಮ, ಆಕೆ ಯಾರನ್ನೂ ಸೈರಿಸೋಳಲ್ಲಂತೆ. ಇದೇ ಊರಲ್ಲಿ ಗಂಡನ ತಮ್ಮ ಮೆಡಿಕಲ್ ಓದ್ತಾ ಇದಾನೆ. ಅವನ್ನೇ ಮನೆಗೆ ಸೇರಿಸೋಲ್ಲ ಗಯ್ಯಾಳಿ. ಮೊನ್ನೆ ಮನೆಯಾತ್ನೇ ನಂತಾವ ಹೇಳಿಕೊಂಡು ಗೋಳಾಡಿದ. ಆತ ಸಂಭಾವಿತ ಕಣಮ್ಮ... ಪಾಪ' ಶರಭಣ್ಣನ ವ್ಯಾಖ್ಯಾನ ನಡೆದಿರುತ್ತದೆ. ಅಷ್ಟರಲ್ಲಿ ಅಪ್ಪ ಆಫೀಸಿನಿಂದ ಬಂದಿದ್ದರಿಂದ ಮಾತು ಅಲ್ಲಿಗೇ ನಿಲ್ಲುತ್ತದೆ. ತಿಂಗಳ ಎರಡನೇ ತಾರೀಕು ಶರಭಣ್ಣನ ಸವಾರಿ ಬಂದಿದೆಯೆಂದರೆ ಅದು ಬಾಡಿಗೆ ವಸೂಲಿಗೆ ಎಂಬ ಪರಿಚಯವಿದ್ದ ಅಪ್ಪ, 'ಅಯ್ಯೋ, ನೀವೇಕೆ ಬಂದ್ರಿಸ್ವಾಮಿ? ನಾನೇ ಬಂದು ಕೊಡ್ತಾ ಇದ್ದನಲ್ಲ' ಎಂದು ಅಪ್ಪ ಹಣ ಎಣಿಸಿಕೊಡುವಾಗ ಪಂಕಜ ಹೊರಗಡೆ ಬಂದು ಜಗಲಿಯ ಮೇಲೆ ಕುಳಿತುಕೊಳ್ಳುತ್ತಾಳೆ ಜಿಗುಪ್ಸೆಯಿಂದ.




ಒಂದು ಸಂಜೆ ಪಂಕಜ ಜಗಲಿಯ ಮೇಲೆ ಕೂತು ಕಾದಂಬರಿಯೊಂದನ್ನು ಓದುತ್ತಿರುವಾಗಲೇ ಮಧು ಯಾರದ್ದೋ ಕೈ ಹಿಡಿದು ಜಗಿಯುತ್ತಾ ಬರುವುದು ಕಾಣುತ್ತದೆ. ಸುಂದರ ಕಾಯ ಹರೆಯದ ಈ ವ್ಯಕ್ತಿ ಯಾರಿರಬಹುದೆಂದು ಪಂಕಜ ತಲೆಕೆಡಿಸಿಕೊಳ್ಳುತ್ತಾಳೆ. ತಾನೇ ಎದ್ದು 'ಕೀ' ಕೊಟ್ಟು 'ಕ್ಲಾಸ್ ಆಯ್ತಾ ಮರೀ' ಎಂದು ತನ್ನತ್ತ ಎಳೆದುಕೊಂಡು ಮುದ್ದು ಮಾಡುತ್ತಾಳೆ. 'ಯಾರೋ ಮರಿ ಇವರು?' ಪಿಸುಗುಟ್ಟುತ್ತಾಳೆ. 'ಅಂಕಲ್' ಎಂದು ಜೋರಾಗಿ ಹೇಳುತ್ತಾ ಮಧು ಓಡುತ್ತಾನೆ. ಆತ ನನ್ನ ಕಡೆಯೇ ನೋಡುತ್ತಾ ಮಧುವಿನ ಸಂಗಡ ನಡೆಯುತ್ತಾನೆ. ಅವಳಿಗೋ ಕಸಿವಿಸಿ. ಮಧು ಬೀಗವನ್ನು ತೆಗೆದು ಒಳಹೋದರೂ ಆತ ಮಾತ್ರ ಮನೆಯ ಒಳ ಹೋಗದೆ ಮಧುವನ್ನು ಮುದ್ದು ಮಾಡಿ ಕ್ಯಾಡ್‌ಬರೀಸ್ ಅವನ ಕೈಗಿಟ್ಟು 'ಟಾಟಾ' ಹೇಳಿ ಹೊರಟು ಬಿಡುತ್ತಾನೆ. ರಾತ್ರಿ ಪಂಕಜ ಅಮ್ಮನಿಗೆ ಆ ವಿಷಯ ಹೇಳಿದಾಗ, 'ಮಗುವಿನ ಮೇಲಿನ ಪ್ರೀತಿಗೆ ಇಷ್ಟು ದೂರ ಬಂದಿರಬೇಕು. ಆಕೆಯ ಮೈದುನ ಮೆಡಿಕಲ್ ಓದೋದು ಇವನೇ ಇರಬೇಕು. ಅವನ ಬಿಳಿಕೋಟ್‌ನಲ್ಲಿ ಸ್ಟೆತಾಸ್ಕೋಪ್ ಇರೋದನ್ನು ನಾನು ಗಮನಿಸಿದೆ ಕಣೆ' ಅಮ್ಮ ಅಂದಾಗ ಇವಳಲ್ಲೆಂತದೋ ಪುಳಕ.

ಮಾರನೆಯ ದಿನವೂ ಜಗಲಿಯ ಮೇಲೆ ಕುಂತು ಕಾದಂಬರಿ ಹಿಡಿಯುತ್ತಾಳೆ. ಮಧುವಿನ ಜೊತೆ ಮೆಡಿಕಲ್ ಬಾಯ್ ಬರುತ್ತಾನೆ. ಎದ್ದು ಹೋಗಿ ಮಧುಗೆ ಇವಳೇ 'ಕೀ' ಕೊಡುತ್ತಾಳೆ. ಒಳ್ಳೆಯ ಚೂಡಿದಾರ್ ಧರಿಸಿರುತ್ತಾಳೆ. ಅವನು ಇವಳತ್ತಲೇ ನೋಡಿ ಮುಗುಳ್ನಕ್ಕಂತೆ ಭಾಸವಾಗುತ್ತದೆ. ಈಗಲೂ ಆತ ಒಳಹೋಗುವುದಿಲ್ಲ. ಮಧುಗೆ ಚಾಕೊಲೇಟ್ ಸಮೇತ ಮುತ್ತಿಟ್ಟು ಇವಳತ್ತ ಒಮ್ಮೆ ನೋಡಿ ಹೊರಟು ಹೋಗುತ್ತಾನೆ. ಇವಳಲ್ಲೆಂತದೋ ಖುಷಿ. ಭಾನುವಾರ ಮಧು ಪಂಕಜ ಮನೆಯಲ್ಲೇ ಆಟವಾಡುತ್ತಿರುತ್ತಾನೆ. ಎದುರು ಮನೆಯ ಮುಂದುಗಡೆ ಸೈಕಲ್ಲೊಂದು ನಿಂತಿದ್ದನ್ನು ಪಂಕಜ ಗಮನಿಸುತ್ತಾಳೆ. ಅದೇ ಯುವಕ!

'ಮಧು ನಿಮ್ಮ ಅಂಕಲ್' ಎಂದವನಿಗೆ ತೋರಿಸುತ್ತಾಳೆ. 'ಅಂಕಲ್ ಎಂದು ಮಧು ಓಡಿ ಹೋಗುತ್ತಾನೆ. ಆತ ಅವನ ಕೈಲಿ ಕ್ಯಾಡ್‌ಬರೀಸ್ ಕೊಟ್ಟು ಒಳ ಹೋಗುತ್ತಾನೆ. ಇವಳು ಪುಸ್ತಕ ಹಿಡಿದಿದ್ದರೂ ಕಣ್ಣೆಲ್ಲಾ ಕಿಟಕಿಯಿಂದಾಚೆಗೆ. ಕಣ್ಣು ಮತ್ತು ಮನಸ್ಸು ಆತನನ್ನು ನೋಡಲು ಸ್ಪರ್ಧೆಗಿಳಿದಿರುತ್ತವೆ. ಸುಮಾರು ಹೊತ್ತಿನ ನಂತರ ಮನೆಯಿಂದ ಹೊರ ಬಂದು ಸೈಕಲ್ ಏರುತ್ತಾನೆ. ಆಕಸ್ಮಿಕವೆಂಬಂತೆ ಕಿಟಕಿಯತ್ತ ನೋಡುತ್ತಾನೆ. ಸಣ್ಣದಾಗಿ ನಗುತ್ತಾನೆ. ಪಂಕಜ ನಾಚಿ ನೀರಾಗಿ ಬಿಡುತ್ತಾಳೆ. ಎದುರು ಮನೆಯಾತನೂ ಹೊರಬಂದು ಇವಳತ್ತಲೇ ನೋಡುವಾಗ ಬದಿಗೆ ಸರಿದು ಬಿಡುತ್ತಾಳೆ. ರಾತ್ರಿ ಮಲಗುವಾಗ ಅಮ್ಮನ ಬಳಿ ಮಧ್ಯಾಹ್ನ ನಡೆದ ವಿಷಯವನ್ನು ವರದಿ ಒಪ್ಪಿಸುತ್ತಾಳೆ.

'ಎಷ್ಟೇ ವೈಮನಸ್ಸಿದ್ದರೂ ಬಾಂಧವ್ಯ ಬಿಡುತ್ತೇ?' ಎಂದು ತಮ್ಮ ಗತಜೀವನದ ಬಗ್ಗೆ ಹೇಳುತ್ತಾಳೆ ಅಮ್ಮ. ತಾನು, ತನ್ನ ಅಣ್ಣ ಇಬ್ಬರೂ ದ್ವೇಷ ಸಾಧಿಸಿದ್ದು, ಕೊನೆಗೆ ಅಜ್ಜಿ ಸತ್ತಾಗ ಒಂದಾದದ್ದು ಎಲ್ಲವನ್ನೂ ಬಣ್ಣಿಸುತ್ತಾಳೆ. ಬೋರ್ ಎನಿಸಿದರೂ 'ಹೂಂ'ಗುಟ್ಟುತ್ತಾ ನಿದ್ದೆ ಹೋಗುತ್ತಾಳೆ. ನಿದ್ದೆಯ ಮೊಂಪರಿನಲ್ಲಿ ಅಮ್ಮನನ್ನು ತಬ್ಬಿದಾಗ ಮಧುವಿನ ಅಂಕಲ್‌ನನ್ನೇ ತಬ್ಬಿಕೊಂಡಂತಾಗಿ ಎಚ್ಚರವಾಗಿ ಬಿಡುತ್ತದೆ. ಪರೀಕ್ಷೆ ಸಮೀಪಿಸುತ್ತಿರುವುದರಿಂದ ಎಲ್ಲಾ ಚಿಲ್ಲರೆ ಆಲೋಚನೆಗಳನ್ನು ಬದಿಗೊತ್ತಿ ಪುಸ್ತಕ ಹಿಡಿಯುತ್ತಾಳೆ. ಮೊಬೈಲ್ ರಿಂಗ್ ಆಗುತ್ತದೆ.ಗೊತ್ತಿಲ್ಲದ ನಂಬರ್, ಆದರೂ ಎತ್ತುತ್ತಾಳೆ. ಯಾವುದೋ ಜಾಹೀರಾತು ಎದುರು ಮನೆಯಾಕೆ'ಕೀ' ಕೊಡಲು ಬರುತ್ತಾಳೆ. ಅಮ್ಮ ಆಕೆಯೊಡನೆ ಹರಟುವುದು ಕೇಳುತ್ತದೆ.

'ನಿನ್ನೆ ನಿಮ್ಮವರ ತಮ್ಮ ಅದೇ ಮೆಡಿಕಲ್ ಹುಡುಗ ಬಂದ್ದಾಗಿತ್ತು ಕಣ್ರೆ' ಅನ್ನುತ್ತಾಳೆ ಅಮ್ಮ. 'ಬಂದಿದ್ದಾನು ಬಿಡಿ. ನಾನು ಮಧ್ಯಾಹ್ನ ಮನೇಲಿ ಇರಲಿಲ್ಲ. ದುಡ್ಡು ಕೇಳೋಕೆ ಬಂದಿರ್ತಾನೆ' ಎನ್ನುತ್ತಾ ಆಕೆ ಹೋಗಿ ಸ್ಕೂಟರ್ ಏರುತ್ತಾಳೆ. ತಾನಾದರೂ ಯಾಕೆ ಹೇಳಿದೆನಪ್ಪಾ. ಗಂಡನ್ನ ಕೇಳ್ತಾಳೋ ಏನೋ ಗಯ್ಯಾಳಿ. ಎಂತಹ ಹ್ಯಾಂಡ್ಸಮ್ ಮೈದುನನ ಬಗ್ಗೆ ಈ ಡುಮ್ಮಿಗೇಕಿಷ್ಟು ತಾತ್ಸಾರ ಎಂದು ತನಗನಿಸಿದನ್ನು ಪಂಕಜಳ ಅಮ್ಮ ಮಗಳ ಬಳಿ ಶೇರ್ ಮಾಡಿಕೊಳ್ಳುತ್ತಾಳೆ. ಇವಳಿಗೂ ಹಾಗೆ ಅನಿಸುತ್ತೆ. ಹಾಗೂ ಹೀಗೂ ಊಟದ ಸಮಯದವರೆಗೂ ಓದಿಕೊಳ್ಳುತ್ತಾಳೆ. ಪುಸ್ತಕ ಹಿಡಿದಿದ್ದರೆ ಅಮ್ಮನ ಕಾಟವಿರದು. ಮೊಬೈಲ್ ಹಿಡಿದರೆ ಸಾಕು ಏನಾದರೊಂದು ಕೆಲಸ ಹೇಳುತ್ತಾಳೆಂದು ಫಿಸಿಕ್ಸ್ ಅರ್ಥವಾಗದಿದ್ದರೂ ಪುಸ್ತಕ ಬಿಡುವುದಿಲ್ಲ. ಹೊರಗಡೆ ಸೈಕಲ್ ಬೆಲ್ ಆದಾಗ ಯಾರಿರಬಹುದೆಂದು ಪಂಕಜ ಉತ್ಸಾಹದಿಂದಲೇ ಹೊರಬರುತ್ತಾಳೆ. ಮಧುವಿನ ಅಂಕಲ್ ನಿಂತಿರುತ್ತಾನೆ.

ಕೀ ಕೇಳುತ್ತಾನೆ. ಅಮ್ಮ ಕೊಡಲು ಅನುಮಾನಿಸುತ್ತಾಳೆ. ಕಾಲೇಜು ಹಾಸ್ಟಲ್ ದೂರವಾಗುತ್ತೆ, ಆಚೆ ಸ್ವಲ್ಪ ರೆಸ್ಟ್ ತಗೊಂಡು ಹೋಗ್ತೀನಿ ಎಂದಾಕೆ ಕೇಳದಿದ್ದರೂ ಹೇಳುತ್ತಾನೆ, ಕೀ ಕೊಡುತ್ತಾಳೆ. ಸಂಜೆ ನಾಲ್ಕು ಗಂಟೆಗೆಲ್ಲಾ ಬಂದು 'ಕೀ' ಹಿಂದಿರುಗಿಸಿದಾಗ ಅಮ್ಮನೇ ಬಲವಂತವಾಗಿ ಒಳಗೆ ಕರೆದು ಕಾಫಿ ಕೊಡುತ್ತಾಳೆ. ಕಾಫಿ ಕುಡಿಯುತ್ತಾ ಆಗಾಗ ಹೊರಗಡೆ ಬಂದು ನಿಂತ ಪಂಕಜಳನ್ನು ನೋಡಿ ಖುಷಿಪಡಿಸುತ್ತಾನೆ. 'ಇಫ್ ಯು ಡೋಂಟ್ ಮೈಂಡ್ ಆಂಟಿ... ಒಂದು ವಿಷಯ ಎಂದು ಖಿನ್ನನಾಗುತ್ತಾನೆ. ಪಂಕಜ ಅವಳಮ್ಮ ಇಬ್ಬರೂ ಅವನನ್ನೇ ಕುತೂಹಲ ಬೆರಸಿ ನೋಡುತ್ತಾರೆ. 'ಅದೇ ಆಂಟಿ ನಾನು... ನಾನು